# ಹುಲಿಗೆ ಹಣ್ಣು

ಮಲೆನಾಡಿನ ಗುಡ್ಡ ಬೆಟ್ಟಗಳಲ್ಲಿ ಸುತ್ತಿದಾಗ ಅನೇಕ ಕಾಡುಹಣ್ಣುಗಳು ನಮಗೆ ಕಾಣಸಿಗುತ್ತವೆ. ಹುಳಿ, ಸಿಹಿ, ಒಗರು.. ಹೀಗೆ ನಾನಾ ಸ್ವಾದಗಳಲ್ಲಿ ಈ ಹಣ್ಣುಗಳು ನಮಗೆ ಸಿಗುತ್ತವೆ. ಚಿತ್ರದಲ್ಲಿ ಕಾಣುವ ಹುಲಿಗೆ ಹಣ್ಣು ಬಳ್ಳಿಯಲ್ಲಿ ಬಿಡುವಂತಹ ಹಣ್ಣು. ತಿನ್ನಲು ವಿಪರೀತ ಹುಳಿ ಇರುವ ಈ ಹಣ್ಣನ್ನು ತಿನ್ನುವುದೇ ಒಂದು ಮಜಾ. ಬಾಲ್ಯದ ದಿನಗಳಲ್ಲಿ ನಾವು ಶಾಲೆಗೆ ಹೋಗುವಾಗ ಈ ಹಣ್ಣನ್ನು ತಿನ್ನುತ್ತಿದ್ದೆವು. ಮಳೆಗಾಲದಲ್ಲಿ ಕಾಣಸಿಗುವ ಈ ಹಣ್ಣಿನ ಸ್ವಾದ ಮರೆಯಲು ಅಸಾಧ್ಯವಾದುದು.

**-ತ್ರೈರೊಳ್ಳಿ ಮಂಜುನಾಥ ಉಡುಪ, ಮಂಡ್ಯ**





# ಬಳೆಗಾರ್ತಿ ಲಕ್ಷ್ಮಿಯ ಉತ್ಸಾಹ!

ಬಳೆಗಾರ ಚೆನ್ನಯ್ಯ ಮನೆಗೆ ಬಾರದೇ ವರ್ಷಗಳೇ ಕಳೆದರೂ, ಲಕ್ಷ್ಮಿ ಎಂಬ ಈ ಬಳೆಗಾರ್ತಿ ಚಿಕ್ಕಮಗಳೂರಿನ ಈ ಊರಿಗೆ ತಪ್ಪದೇ ಬರುತ್ತಾರೆ. ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ತಾಲ್ಲೂಕಿನ ಕೊಪ್ಪದ ಸೀತೂರಿನ ಈಕೆ ವಾರಕ್ಕೊಮ್ಮೆಯಾದರೂ ತನ್ನ ಗಾಜಿನ ಬಳೆಗಳ ಗಂಟನ್ನು ತಲೆಗೇರಿಸಿಕೊಂಡು ಊರೂರಿಗೆ ಅಲೆಯುತ್ತ ಬಳೆಗಳ ವ್ಯಾಪಾರ ಮಾಡುತ್ತಾರೆ. ಈ ರೀತಿ ಕಳೆದ 50 ವರ್ಷಗಳಿಂದಲೂ ಮಾಡುತ್ತಿದ್ದಾರೆ. ಊರಿನಲ್ಲಿ ಮದುವೆ, ಶುಭ ಸಮಾರಂಭ ಇರುವುದು ಗೊತ್ತಾದರೆ ಸಾಕು, ಹಿಂದಿನ ದಿನವೇ ಲಕ್ಷ್ಮಿ ಆ ಮನೆಗೆ ಬಂದು ಹೆಣ್ಣುಮಕ್ಕಳ ಕೈಗಳಿಗೆ ಬಳೆಗಳನ್ನು ಇಡಿಸಿ ಮನೆ ತುಂಬ ಸಂಭ್ರಮದ ವಾತಾವರಣ ಸೃಷ್ಟಿಸುತ್ತಾರೆ.

ಇತ್ತೀಚಿನ ಫ್ಯಾಷನ್ ಟ್ರೆಂಡ್ ನಡುವೆ ವ್ಯಾಪಾರ ಕುಂದಿದೆಯಾದರೂ ತಲೆ ಕೆಡಿಸಿಕೊಳ್ಳದ ಈಕೆ ತನ್ನ ವೃತ್ತಿಯಲ್ಲೇ ಖುಷಿ ಕಂಡುಕೊಂಡಿದ್ದಾರೆ.

**-ಕೃಷ್ಣಮೂರ್ತಿ ಆಚಾರ್ ಎಚ್.ಕೆ.,**
**ಎನ್.ಆರ್.ಪುರ**

# ಒಂದನೇ ಬುಕ್ಕರಾಯನ ಶಿಲ್ಪ

ವಿಜಯನಗರದ ಪ್ರಥಮ ಪ್ರಭು ಬುಕ್ಕರಾಯನ ಶಿಲ್ಪ ದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯದ ಗರ್ಭಗುಡಿಯಲ್ಲಿದೆ. ಕಪ್ಪು ಶಿಲೆಯಲ್ಲಿ ಕೆತ್ತಲ್ಪಟ್ಟ, ಧ್ಯಾನಭಂಗಿ, ಸರ್ಪಕುಂಡಲಧಾರಿಯಾಗಿ ಕಿರೀಟ ಧರಿಸಿರುವ ಮನೋಹರ ಶಿಲ್ಪ ಇದಾಗಿದೆ. ಮೊದಲು ಈ ಶಿಲ್ಪದ ಬಗ್ಗೆ ಸಂಶೋಧಕರಲ್ಲಿ ಭಿನ್ನಾಭಿಪ್ರಾಯವಿದ್ದು, ಅದನ್ನು ಹಂಪಿ ವಿಶ್ವವಿದ್ಯಾಲಯದ ಪ್ರೊ.ಲಕ್ಷ್ಮಣ ತೆಲಗಾವಿ ಅಧ್ಯಯನ ನಡೆಸಿ ಇದು ಬುಕ್ಕರಾಯನ ಶಿಲ್ಪ ಎಂದು ದೃಢೀಕರಿಸಿದ್ದಾರೆ. ಈ ದೇವಸ್ಥಾನದ ಬಾಗಿಲು ಕಟ್ಟೆಯ ಮೇಲೆ ಎರಡು ಶಿಲಾಶಾಸನಗಳಿವೆ. ಕಾಲಮಾನ 1355–1356. ಇದು ಬುಕ್ಕರಾಯನ ಆಳ್ವಿಕೆ ಕಾಲ. ಇದರಲ್ಲಿ ನಿರ್ಮಾಣದ ವಿವರಣೆ ಇದೆ. ಇದರಲ್ಲಿ ವಿಜಯನಗರದ ರಾಜಪ್ರತಿನಿಧಿ ಮಲ್ಲಿನಾಥ ಒಡೆಯರ್ ಎಂಬ ಅಂಕಿತವಿದೆ. ಹಿರಿಯರು ಚಿತ್ರದುರ್ಗವನ್ನು ಎರಡನೆಯ ಹಂಪೆ ಎಂದು ಕರೆದಿರುವುದರಲ್ಲಿ ಅತಿಶಯೋಕ್ತಿಯೇನಿಲ್ಲ.

**-ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ**

